ಶ್ರೀ ಆರ್. ಎಚ್. ಜಾಲಪ್ಪ.— ಅಧ್ಯಕ್ಷರೇ, ಹೇಳಬೇಕಾದ್ದನ್ನೆಲ್ಲಾ ನಾನು ಈಗಾಗಲೇ ಹೇಳಿದ್ದೇನೆ. ಸಸ್ಪೆಂಡ್ ಮಾಡಿದಹಾಗೆ ಮಾಡಿ ಒಂದು ತಿಂಗಳಲ್ಲಿ ಮತ್ತೆ ರಿವೋಕ್ ಮಾಡುತ್ತಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಈ ಬೂಟಾಟಿಕೆ ನನಗೆ ಗೊತ್ತಿಲ್ಲ, ನನಗೆ ಅದು ಅನಾವಶ್ಯಕ. ತಪ್ಪಿತಸ್ಥ ಅಧಿಕಾರಿಗಳನ್ನು ಯಾವುದೇ ಕಾರಣದಿಂದ ಸೇಫ್‌ಗಾರ್ಡ್ ಮಾಡುವುದು ಅನಾವಶ್ಯಕ. ಕಾನೂನು ಪ್ರಕಾರವಾಗಿ ಏನು ಶಿಕ್ಷೆ ಕೊಡಬೇಕೋ ಅದನ್ನು ಕೊಡುತ್ತೇವೆ ಎಂಬ ಭರವಸೆ ಕೊಡುತ್ತೇನೆ. ಅವರು ಹೇಳಿದರು ಪೋಲೀಸರು ಎಂ.ಪಿ ಗೇ ಹೀಗೆ ಮಾಡಿದರೆ ಬೇರೆಯವರ ಗತಿ ಏನು ಎಂದು. ನಿಮಗೇನೂ ಆಗುವುದಿಲ್ಲ ಎಂದು ನಾನು ಅವರಿಗೆ ಭರವಸೆ ಕೊಡುತ್ತೇನೆ.

## ನಿಯಮ ೩೩ಳಿರ ಮೇರೆಗೆ

### ೧. ಸಹಕಾರ ಸಂಘಗಳಿಂದ ರೈತರು ಪಡೆದ ಸಾಲದ ಮೇಲಿನ ಬಡ್ಡಿ ಸಂಸ್ಥಿ ಬಡ್ಡಿ ಮನ್ನಾ ಮಾಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಕರ್ನಾಟಕ ರಾಜ್ಯದ ಸಹಕಾರ ಸಂಘಗಳಿಂದ ಪಡೆದ ರೈತರ ಬಡ್ಡಿ, ಸಂಸ್ಥಿ ಬಡ್ಡಿ ಮನ್ನಾ ಮಾಡಿ ಸರ್ಕಾರ ಆಜ್ಞೆ ಹೊರಡಿಸಿದ್ದು ರಾಜ್ಯಪಾಲರ ಭಾಷಣದಲ್ಲಿ ಅಸಲು ಕಟ್ಟುವ ಅವಧಿಯನ್ನು ೩೦-೬-೧೯೮೮ರ ವರೆಗೆ ಅವಧಿ ಕೊಡುವುದಾಗಿ ತಿಳಿಸಿ ಸರ್ಕಾರಿ ಆಜ್ಞೆಯಲ್ಲಿ ಕೇವಲ ಇದರ ಅವಧಿ ೩೧-೩-೧೯೮೮ ಎಂದು ತಿಳಿಸಿ ೩೦-೬-೧೯೮೮ಕ್ಕೆ ಸುಸ್ಥಿ ಆದ ರೈತರಿಗೆ ಮಾತ್ರ ಈ ಸೌಲಭ್ಯವೆಂದು ತಿಳಿಸಿದೆ. ಈಗ ಸಹಕಾರಿ ಕಚೇರಿಯು ೮-೩-೧೯೮೮ ರಂದು ಒಂದು ಪತ್ರಿಕಾ ಹೇಳಿಕೆ ಕೊಟ್ಟು ೧೯೮೭-೮೮ನೇ ಸಾಲಿನ ರೈತರಿಗೂ ಈ ಸೌಲಭ್ಯ ವಿಸ್ತರಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಆದರೆ ಅವಧಿ ಬಹಳ ಕಡಿಮೆ ಇರುವುದರಿಂದ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುವಂತೆ ಈ ಅವಧಿ ೩೦-೬-೧೯೮೮ರ ವರೆಗೆ ವಿಸ್ತರಿಸುವ ಬಗ್ಗೆ ಮತ್ತು ೧೯೮೭-೮೮ನೇ ಸಾಲಿನಲ್ಲಿ ಬರಗಾಲಕ್ಕೆ ತುತ್ತಾಗಿ ಶೇಕಡ ೨೫ಕ್ಕೂ ಕಡಿಮೆ ಬೆಳೆ ಬಂದಿರುವ ರೈತರ ಸಾಲವನ್ನು ಬಡ್ಡಿರಹಿತ ದೀರ್ಘಾವಧಿ ಸಾಲವಾಗಿ ಪರಿವರ್ತಿಸಬೇಕೆಂದೂ ಮತ್ತು ಈ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದೇ ಎಂಬ ಬಗ್ಗೆ ಸರ್ಕಾರದ ಹೇಳಿಕೆ ಪಡೆಯಬಯಸುತ್ತೇನೆ.

ಶ್ರೀ ಎಚ್. ವಿಶ್ವಾನಾಥಯ್ಯ (ಸಹಕಾರ ಮಂತ್ರಿಗಳು).—ರಾಜ್ಯದ ರೈತರು ತಾವು ಪಡೆದ ಸಹಕಾರಿ ಕೃಷಿ ಸಾಲಗಳ ಬಾಬ್ತು ಅಸಲು ಮೊಬಲಗು ಪಾವತಿ ಮಾಡಿ, ಬಡ್ಡಿ ರಿಯಾಯಿತಿ ಪಡೆಯುವ ಬಗ್ಗೆ ಸರ್ಕಾರ ಈಗಾಗಲೇ ೨ ಆದೇಶಗಳನ್ನು ಹೊರಡಿಸಿದೆ. ಸದರಿ ಆದೇಶಗಳ ಪ್ರಕಾರ ೩೦-೬-೧೯೮೮ಕ್ಕೆ ಸುಸ್ಥಿಯಾದ ಸಾಲಗಳ ಬಾಬ್ತು ಪೂರ ಅಸಲನ್ನು ೩೧-೩-೧೯೮೮ ರೊಳಗೆ ಪಾವತಿ ಮಾಡಿ, ಬಡ್ಡಿ ರಿಯಾಯಿತಿ ಪಡೆಯಬಹುದಾಗಿದೆ. ಮುಂತ್ತು ೧೯೮೭-೮೮ನೇ ಚಾಲ್ತಿ ಸಾಲಿನ ಕಂತು ಇಲ್ಲವೆ ಸಾಲಗಳ ಬಾಬ್ತು ಅಸಲನ್ನು ನಿಗದಿತ ಕಾಲದಲ್ಲಿ ಪಾವತಿ ಮಾಡಿ, ಬಡ್ಡಿ ರಿಯಾಯಿತಿ ಪಡೆಯಬಹುದಾಗಿದೆ, ಸದರಿ ಸುಸ್ಥಿ ಇಲ್ಲವೆ ಚಾಲ್ತಿ ಸಾಲಗಳನ್ನು ಮರುಪಾವತಿ ಮಾಡುವ ಅವಧಿಯನ್ನು ಸರ್ಕಾರ ವಿಸ್ತರಿಸಲು ಬಯಸುವುದಿಲ್ಲ. ೧೯೮೭-೮೮ರ ಸಾಲಿನಲ್ಲಿ ಶೇಕಡ ೨೫ಕ್ಕಿಂತ ಕಡಿಮೆ ಬೆಳೆ ಬಿದ್ದ ಪ್ರದೇಶಗಳಲ್ಲಿನ ರೈತರು ನಬಾರ್ಡಿನವರ ಸೂಚನೆಗಳ ಪ್ರಕಾರ ತಮ್ಮ ಸಾಲಗಳನ್ನು ಮಧ್ಯಮಾವಧಿ ಪರಿವರ್ತಿತ ಸಾಲಗಳನ್ನಾಗಿ ಮಾರ್ಪಡಿಸಿಕೊಳ್ಳಲು ಮಾತ್ರ ಅರ್ಹರಿರುತ್ತಾರೆ.

### ೨) ರಾಜ್ಯದ ತೋಟದ ಬೆಳೆಗಾರರ ಸಂಘದವರು ರೈತರಿಂದ ಆಲೂಗಡ್ಡೆಯನ್ನು ಕೊಂಡುಕೊಳ್ಳುವ ಬಗ್ಗೆ

SRI R. VENKATARAMAIAH (Mulubagil).—The society with several selling outlets (KIOSKS) Vegetable & Fruit Growers' Association's Co-op, Society run under the supervision of the Horticultural Department is not buying from the grower's, the potatoes, the prices of which has slumped like anything resulting in heavy loss to growers

in the Karnataka State particularly Kolar, Hassan & Rural Bangalore District. The Society is expected to safeguard the interests of the farmers during the slump season which is expected to give supporting price and purchase from the producer's get good price and thus protect their interest. They can also purchase and storage in cold storages. The society which is based on service motive has failed to cater to the needs of the commonman and agriculturists.

Hence, I call the Hon. Minister for Horticulture requesting him to take immediate appropriate steps to make purchase the bulk quantity and save the agriculturists from the heavy losses.

I call upon the Hon. Minister to make a statement and give necessary help.

ಶ್ರೀ ವೈ.ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಬೆಳೆಯುತ್ತಿರುವ ಎಲ್ಲಾ ವ್ಯವಸಾಯೋತ್ಪನ್ನಗಳಿಗೆ ಹಾಗೂ ಆಲೂಗೆಡ್ಡೆಗೆ ನ್ಯಾಯವಾದ ಬೆಲೆಯನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ದಿಸೆಯಲ್ಲಿ ಸ್ವಲ್ಪಮಟ್ಟಿಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗಿದೆ. ಬೆಳೆದ ರೈತನಿಗೆ ನ್ಯಾಯವಾದ ಬೆಲೆಯನ್ನು ಒದಗಿಸಿಕೊಡುವ ದಿಸೆಯಲ್ಲಿ ಮಾಡಿದ ಪ್ರಯತ್ನದ ಫಲವಾಗಿ ತೋಟಗಾರಿಕೆ ಬೆಳೆಗಾರರ ಸಂಘ ಉದ್ಭವವಾಯಿತು. ಈ ಸಂಘ ೬೦ ರಿಂದ ೭೦ ಮೆಟ್ರಿಕ್ ಟನ್‌ನಷ್ಟು ಉತ್ಪನ್ನವನ್ನು ರೈತರಿಂದ ಕೊಂಡು ಮಾರುವಂಥ ಕೆಲಸವನ್ನು ಮಾಡುತ್ತಿದೆ. ಆಲೂಗೆಡ್ಡೆಗೆ ಸಂಬಂಧ ಪಟ್ಟಹಾಗೆ ಹೇಳುವುದಾದರೆ ೬೦೦ ರಿಂದ ೭೦೦ ಮೆಟ್ರಿಕ್ ಟನ್‌ನಷ್ಟು ಪ್ರತಿವರ್ಷ ರೈತರಿಂದ ಕೊಂಡು ಕೊಳ್ಳುವ ಕೆಲಸವನ್ನು ಸೊಸೈಟಿ ಮಾಡುತ್ತಿದೆ. ೧೯೮೭-೮೮ರಲ್ಲಿ ಈಗಾಗಲೇ ೪೫೫ ಮೆಟ್ರಿಕ್ ಟನ್ ಆಲೂಗೆಡ್ಡೆಯನ್ನು ರೈತರಿಂದ ಕೊಂಡುಕೊಂಡು ಸೊಸೈಟಿ ಮಾರಾಟ ಮಾಡಿದೆ. ಈ ವರ್ಷ ಈ ಸೊಸೈಟಿ ಸುಮಾರು ೯ ಕೋಟಿ ರೂಪಾಯಿಗಳ ತರಕಾರಿ ವ್ಯವಹಾರವನ್ನು ಈ ರಾಜ್ಯದಲ್ಲಿ ಮಾಡಿದೆ. ೧೦೩ ಮಾರಾಟ ಮಾಡುವಂಥ ಕೇಂದ್ರಗಳಿವೆ. ಬೆಂಗಳೂರು, ಮೈಸೂರು, ತುಮಕೂರು ಮಂತ್ತು ಮಂಗಳೂರಿನಲ್ಲಿ ಈ ಕೇಂದ್ರಗಳಿವೆ. ಇಷ್ಟೆಲ್ಲಾ ಸಂಘದ ಚಟುವಟಿಕೆಗಳಿದ್ದರೂ ಕೂಡ ರಾಜ್ಯದಲ್ಲಿ ಬೆಳೆಯುವಂಥ ಆಲೂಗೆಡ್ಡೆ ಮತ್ತು ಬೇರೆ ಬೇರೆ ತರಕಾರಿ ಬೆಳೆಗಾರರಿಗೆ ನ್ಯಾಯವಾದ ಬೆಲೆಯನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಾಗಿದೆ ಎಂಬುದನ್ನು ನಾನೂ ಒಪ್ಪಿಕೊಳ್ಳುವುದಿಲ್ಲ. ಅದು ಸಾಧ್ಯವಾಗಿಲ್ಲ ಎಂದು ಸದಸ್ಯರ ಜೊತೆಯಲ್ಲೇ ನಾನು ಒಪ್ಪಿಕೊಳ್ಳುತ್ತೇನೆ. ಈ ದಿಸೆಯಲ್ಲಿ ರೈತರಿಗೆ ಸಹಾಯ ಮಾಡಬೇಕೆಂದು, ಈಗ ಇರುವ ವ್ಯವಸ್ಥೆ ಸಾಲದೆಂದು ಕರ್ನಾಟಕ ಸರ್ಕಾರ ರಾಷ್ಟ್ರೀಯ ಹೈನುಗಾರಿಕೆ ನಿಗಮದ ಅಧ್ಯಕ್ಷರ ಜೊತೆಯಲ್ಲಿ ಚರ್ಚೆ ಮಾಡಿ ಅವರ ಒಂದು ಒಪ್ಪಿಗೆಯ ಮೇರೆಗೆ ಈಗಾಗಲೇ ಒಂದು ಬೃಹತ್ ಯೋಜನೆಯನ್ನು ತಯಾರು ಮಾಡಲಾಗಿದೆ. ಈ ಯೋಜನೆಯ ಅಂದಾಜು ೩೦ ಕೋಟಿ ರೂಪಾಯಿಗಳು. ಈ ಒಂದು ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ತರ ಬೇಕೆನ್ನುವ ಮಹತ್ತರವಾದ ಆಕಾಂಕ್ಷೆ ನನಗೆ ಇದೆ. ಈ ರಾಜ್ಯದಲ್ಲಿ ಬೆಳೆಯುವ ತರಕಾರಿಗೆ ಉತ್ತಮ ವಾದ ಬೆಲೆಯನ್ನು ರೈತರಿಗೆ ಕೊಡಿಸಬೇಕೆಂದು ಮಾನ್ಯ ಸದಸ್ಯರಿಗೆ ಎಷ್ಟು ಉತ್ಕಟವಾದ ಆಸೆ ಆಕಾಂಕ್ಷೆ ಇದೆಯೋ ಅಷ್ಟೇ ಉತ್ಕಟವಾದ ಅಭಿಲಾಷೆ ಮತ್ತು ಆಸೆ ನನಗೂ ಇದೆ. ಇದನ್ನು ಮಾಡುವ ದಿಸೆಯಲ್ಲಿ ಪ್ರಯತ್ನ ಮಾಡುತ್ತೇನೆಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡಲಿಚ್ಚಿಸುತ್ತೇನೆ.